9.	ಧಾರವಾಡ	550
10.	ಗುಲ್ಬರ್ಗ	50
11.	ಹಾಸನ	350
12.	ಮೈಸೂರು	400
13.	ರಾಯಚೂರು	150
14.	ಉತ್ತರ ಕನ್ನಡ	50
15.	ಮಂಡ್ಯ	350
	ಒಟ್ಟು	3000

ಈ) 1996-97ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ಕ್ರೋಢೀಕೃತ ಹಣ ರೂ. 2.00 ಕೋಟಿ ಇತ್ತೀಚಿಗೆ ಮಂಡಳಿಗೆ ಬಿಡುಗಡೆಯಾಗಿದೆ. ಖಜಾನೆಯಿಂದ ಈಗಷ್ಟೇ ಹಣ ಪಡೆದಿದ್ದು ಜಿಲ್ಲಾವಾರು ಹಂಚಿಕೆಗೆ ಕ್ರಮ ವಹಿಸಲಾಗುವುದು.

ಉ) ಈ ವಿಶೇಷ ಘಟಕ ಯೋಜನೆಯಡಿ ಕ್ರೋಢೀಕೃತ ಹಣದಲ್ಲಿ ಗದಗ ಪಟ್ಟಣದಲ್ಲಿ 100 ಮನೆಗಳ ನಿರ್ಮಾಣದ ಯೋಜನೆ ಹಮ್ಮಿಕೊಳ್ಳಲಾಗಿದೆ.

ರಾಜ್ಯದಲ್ಲಿ ಹೊಸ ಜಿಲ್ಲೆಯ ರಚನೆ ಕುರಿತು

578 (938) ಶ್ರೀ ಎಸ್. ಎ. ರವೀಂದ್ರನಾಥ್ (ಮಾಯಕೊಂಡ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 9 ಹೊಸ ಜಿಲ್ಲೆ ರಚನೆ ಮಾಡುವುದಾಗಿ ಸರ್ಕಾರವು ಘೋಷಿಸಿರುವುದು ನಿಜವೇ; ಹಾಗಿದ್ದಲ್ಲಿ ಈ ಜಿಲ್ಲೆಗಳು ಯಾವುವು;

ಆ) ಈ ನಿರ್ಧಾರವನ್ನು ಎಂದಿನಿಂದ ಜಾರಿಗೊಳಿಸಲಾಗುವುದು;

ಇ) ಹೊಸ ಜಿಲ್ಲೆಗಳ ರಚನೆ ಬಗ್ಗೆ ಅನಗತ್ಯವಾಗಿ ಹೇಳಿಕೆ ನೀಡಿದ್ದರಿಂದ ಕೆಲವು ಕಡೆ ಗಲಾಟೆಯಾಗಿ ಸಾರ್ವಜನಿಕ ಆಸ್ತಿ ಪಾಸ್ತಿಗೆ ನಷ್ಟವಾದದ್ದು ನಿಜವೇ;

ಈ) ಈ ಗಲಭೆಗಳಲ್ಲಿ ಗದಗದ ಸರ್ಕಾರಿ ಕಛೇರಿಗಳು ಬೆಂಕಿಗಾಹುತಿಯಾಗಿದ್ದು ಇದರಿಂದ ಆದ ನಷ್ಟ ಎಷ್ಟು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೊಸ ಜಿಲ್ಲೆಗಳ ರಚನೆ ವಿಚಾರದಲ್ಲಿ ಕೆಲವು ಕಡೆ ಆದ ಗಲಬೆಯಿಂದ ಸಾರ್ವಜನಿಕ ಆಸ್ತಿ-ಪಾಸ್ತಿಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದಾಗ್ಯೂ, ಹೇಳಿಕೆ ನೀಡಿದ್ದರಿಂದ ಗಲಾಟೆಯಾಗಿರುವುದಿಲ್ಲ.

ಈ) ಸುಮಾರು 317.36 ಲಕ್ಷ ರೂ.ಗಳು.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿನ ಹಿರಿಯ ಅಧಿಕಾರಿಗಳಿಗೆ ವಸತಿ ಸೌಲಭ್ಯ

579 (509) ಶ್ರೀ ಎಂ. ಶ್ರೀನಿವಾಸ (ಉತ್ತರಹಳ್ಳಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಸ್ತೆ ಸಾರಿಗೆ ಸಂಸ್ಥೆಯಲ್ಲಿನ 10 ಕಿರಿಯ ಅಧಿಕಾರಿಗಳಿಗೆ ಕಲ್ಪಿಸಲು ಕೋರಮಂಗಲದ ಕ್ರೀಡಾ ಸಂಕೀರ್ಣದಲ್ಲಿ ಕೊಳ್ಳಲು ನಿರ್ಧರಿಸಿದೆಯೇ;

ಆ) ಪ್ರತಿಯೊಂದು ಮನೆಗೂ ತಗಲುವ ವೆಚ್ಚವೆಷ್ಟು;

ಇ) ಸಾರಿಗೆ ಸಂಸ್ಥೆ ಈಗಾಗಲೇ ಮುಂಗಡ ಹಣ ಪಾವತಿ ಮಾಡಿದೆಯೇ;

ಈ) ಹಾಗಿದ್ದಲ್ಲಿ ಎಷ್ಟು ಹಣ ಪಾವತಿ ಮಾಡಲಾಗಿದೆ;

ಉ) ಈ ಹಣವನ್ನು ಎಲ್ಲಿಂದ ತರಲಾಗಿದೆ ಮತ್ತು ಬಡ್ಡಿ ದರ ಎಷ್ಟು?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಕ. ರಾ. ರ. ಸಾ. ಸಂಸ್ಥೆಯು ಕೋರಮಂಗಲ ಕ್ರೀಡಾ ಸಮುಚ್ಚಯದಲ್ಲಿ ಎರ್ನಾಟಕ ಗೃಹ ಮಂಡಳಿಯಿಂದ 5 ಮನೆಗಳನ್ನು ಖರೀದಿಸುತ್ತಿದೆ.

ಆ) ಪ್ರತಿ ಮನೆಯ ಸರಾಸರಿ ಬೆಲೆಯು ರೂ. 23.69 ಲಕ್ಷಗಳಾಗಿದೆ.

ಇ) ಹೌದು.

ಈ) ಹನ್ನೆರಡೂವರೆ ಲಕ್ಷ ರೂ. ಗಳು.

ಉ) ಪ್ರಾರಂಭಿಕ ಠೇವಣಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿಧಿಗಳಿಂದ ಪಾವತಿಸಲಾಗಿದೆ.

ರಾಜ್ಯದ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳು

581 (913) ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ವಸತಿ ನೀತಿಯನ್ವಯ ಕಟ್ಟ ಬೇಕೆಂದಿರುವ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳು ಎಷ್ಟು;